149th ಸಅ, ಕ್ರ.ಸಂ. 21

## ಕರ್ನಾಟಕ ವಿಧಾನ ಪರಿಷತ್ತು
## ಶೂನ್ಯ ವೇಳೆ

ಶ್ರೀ ಕೆ.ಹರೀಶ್ ಕುಮಾರ್, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯವಾದ ಉದಯವಾಣಿ ಪತ್ರಿಕೆಯಲ್ಲಿ ವರ್ಷ ಕಳೆದರೂ ಮರುಜೀವ ಪಡೆಯದ 104 ಸಹಾಯವಾಣಿ ಕಟ್ಟ ಕಡೆಯ ವ್ಯಕ್ತಿಗೂ ಸುಲಭವಾಗಿ ಲಭ್ಯವಿದ್ದ ಆರೋಗ್ಯ ಸೇವಾ ಸೌಲಭ್ಯ 104 ಸಹಾಯವಾಣಿ ಸ್ಥಗಿತಗೊಂಡು ವರ್ಷ ಕಳೆದರೂ ಮರುಜೀವ ಪಡೆದಿಲ್ಲದಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲೊಂದಾದ 104 ಸಹಾಯವಾಣಿ ಸೇವೆಯನ್ನು ಮತ್ತೆ ಪ್ರಾರಂಭಿಸಲು ಆರೋಗ್ಯ ಇಲಾಖೆ ಟೆಂಡರ್ ಪ್ರಕ್ರಿಯೆ ನಡೆಸಿ ಕೆಲ ತಿಂಗಳುಗಳಿಂದ ಸರ್ಕಾರದ ಅನುಮತಿಗಾಗಿ ಕಾದು ಕುಳಿತಿರುವುದು ತಿಳಿದುಬಂದಿರುತ್ತದೆ.

2022 ನೇ ಸಾಲಿನಲ್ಲಿ ಆರೋಗ್ಯ ಇಲಾಖೆಯು ಆಹ್ವಾನಿಸಿದ್ದ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಕೆಲ ಕಂಪನಿಗಳ ಪೈಕಿ ಅಶೋಕ್ ಬಿಲ್ಡ್‌ಕಾನ್ ಸಂಸ್ಥೆಗೆ ಟೆಂಡರ್ ನೀಡಲು ಆರೋಗ್ಯ ಇಲಾಖೆ ಮುಂದಾಗಿದೆ. ಆದರೆ, ಟೆಂಡರ್ ಪ್ರಕ್ರಿಯೆ ಅಂತಿಮಗೊಳಿಸಲು ಆಗುತ್ತಿಲ್ಲ. ಕೆಲ ತಾಂತ್ರಿಕ ಕಾರಣಗಳಿಂದ ಸೇವೆ ಆರಂಭಿಸಲು ಇನ್ನೂ ಗ್ರೀನ್ ಸಿಗ್ನಲ್ ಕೊಟ್ಟಿಲ್ಲ. ಒಂದು ವೇಳೆ ಸರ್ಕಾರ ಈ ಯೋಜನೆಗೆ ಅನುಮತಿ ನೀಡದಿದ್ದರೆ ಈ ಸೇವೆ ಸಂಪೂರ್ಣವಾಗಿ ಸ್ಥಗಿತಗೊಳ್ಳುವ ಸಾಧ್ಯತೆಗಳಿವೆ.

2021 ರಲ್ಲಿ ಹೈದ್ರಾಬಾದ್ ಮೂಲಕ ಪೆರುಮಾಳ್ ಸ್ವಾಸ್ಥ್ಯ ನಿರ್ವಹಣೆ ಮತ್ತು ಸಂಶೋಧನಾ ಸಂಸ್ಥೆಯು 104 ಸಹಾಯವಾಣಿ ಸೇವೆ ಒದಗಿಸಲು ಗುತ್ತಿಗೆ ಪಡೆದಿತ್ತು. ಹಂತಹಂತವಾಗಿ ಸರ್ಕಾರವು ಹಣ ಬಿಡುಗಡೆ ಮಾಡಿದರೂ ಒಡಂಬಡಿಕೆಯಂತೆ ಸರ್ಕಾರ ಹಣ ನೀಡಿಲ್ಲ ಎಂದು ಆರೋಪಿಸಿ ಈ ಸಂಸ್ಥೆಯು 2022 ರ ಫೆಬ್ರುವರಿಯಲ್ಲಿ ಅರ್ಧಕ್ಕೆ ಸೇವೆಯನ್ನು ಸ್ಥಗಿತಗೊಳಿಸಿತ್ತು.

ಪ್ರತಿನಿತ್ಯ 20 ಸಾವಿರಕ್ಕೂ ಅಧಿಕ ಕರೆಗಳು ಬರುತ್ತಿದ್ದವು ಅಲ್ಲದೆ ಸಹಾಯವಾಣಿ ಸ್ಥಗಿತಗೊಂಡ ಕಾರಣ 350 ಮಂದಿ ಕೆಲಸವನ್ನೂ ಸಹ ಕಳೆದುಕೊಂಡಿದ್ದರು. ಆರೋಗ್ಯವಾಣಿ 104 ಸೇವೆಯು ದಿನದ 24 ಗಂಟೆಯೂ ಸೇವೆ ನೀಡುವಂತಹ ಬಡವರ ಸಂಜೀವಿನಿಯಾಗಿದ್ದು ಆಸ್ಪತ್ರೆ ಸೌಲಭ್ಯಗಳಿಂದ ವಂಚಿತರಾಗಿರುವ ಕರ್ನಾಟಕದ ಗ್ರಾಮೀಣ ಭಾಗದ ಜನರ ಅನುಕೂಲಕ್ಕಾಗಿ ತಜ್ಞ ವೈದ್ಯರ ಸಲಹೆ ಪಡೆಯಲು ಅನುಕೂಲವಾಗುವಂತೆ ಕೂಡಲೇ ಇದಕ್ಕೆ ಮರುಜೀವ ನೀಡಲು ಕ್ರಮ ಕೈಗೊಳ್ಳುವ ಬಗ್ಗೆ:-

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರ ಹೇಳಿಕೆ:**

ರಾಜ್ಯದ ಯಾವುದೇ ಭಾಗದ ಜನರಿಗೆ ದಿನದ 24 ಘಂಟೆಯೂ ಸಣ್ಣ-ಪುಟ್ಟ ವೈದ್ಯಕೀಯ ಸಮಸ್ಯೆಗಳಿಗೆ ಸಲಹೆ ಹಾಗೂ ಚಿಕಿತ್ಸೆ, ಆರೋಗ್ಯ ಸೇವೆಗಳ ವಿರುದ್ಧ ದೂರುಗಳ ಸ್ವೀಕಾರ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಮಾಹಿತಿ, ಮುಂತಾದ ಸೇವೆಗಳನ್ನು ಉಚಿತ '104' ದೂರವಾಣಿ ಕರೆ ಮೂಲಕ ಸೇವೆ ಒದಗಿಸುವ ಉದ್ದೇಶದಿಂದ, ಜೂನ್ 2013 ರಿಂದ ಹುಬ್ಬಳ್ಳಿ ನಗರದ ಐ.ಟಿ. ಪಾರ್ಕ್ ನಲ್ಲಿ ಒಂದು ಕೇಂದ್ರ ಮತ್ತು ಫೆಬ್ರುವರಿ 2018 ರಿಂದ ಬೆಂಗಳೂರಿನ ಇಂದಿರಾನಗರದ ಸರ್. ಸಿ.ವಿ. ರಾಮನ್ ಆಸ್ಪತ್ರೆಯಲ್ಲಿ ಮತ್ತೊಂದು 100-ಆಸನಗಳ '104' ಆರೋಗ್ಯ ಸಹಾಯವಾಣಿ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು.

ಈ ಕಾರ್ಯಕ್ರಮವನ್ನು ಸರ್ಕಾರಿ ಖಾಸಗಿ ಸಹಭಾಗಿತ್ವದಡಿಯಲ್ಲಿ ಹೈದ್ರಾಬಾದಿನ ಪಿರಮಾಲ್ ಸ್ವಾಸ್ಥ್ಯ ಮ್ಯಾನೇಜ್‌ಮೆಂಟ್ರೇ ಸರ್ಚ್ ಇನ್ಸಿಟಿಟ್ಯೂಟ್ (ಪಿ.ಎಸ್.ಎಮ್.ಆರ್.ಐ.) ನೆರವಿನಿಂದ ನಡೆಸಲಾಗುತ್ತಿದ್ದು, ನವೆಂಬರ್-2021 ರಿಂದ ಸಂಸ್ಥೆಯು ಸೇವೆಯನ್ನು ಸ್ಥಗಿತಗೊಳಿಸಿರುತ್ತಾರೆ.

ರಾಜ್ಯದಲ್ಲಿ 104- ಆರೋಗ್ಯ ಸಹಾಯವಾಣಿ ಕಾರ್ಯಕ್ರಮದ ಕರೆ ಕೇಂದ್ರಗಳನ್ನು ನಿರ್ವಹಣೆ ಮಾಡಲು 2021 ನೇ ಸಾಲಿನಲ್ಲಿ ಮೊದಲನೆ ಬಾರಿ ಆಹ್ವಾನಿಸಲಾದ ಟೆಂಡರ್ ಪ್ರಕ್ರಿಯೆಯಲ್ಲಿ ಎಲ್-1 ಸಂಸ್ಥೆರವರು ನಿಗದಿತ ಸಮಯದಲ್ಲಿ bank guarantee ಸಲ್ಲಿಸದೆ ಇದ್ದ ಕಾರಣ ಒಪ್ಪಂದ ಮಾಡಿಕೊಂಡಿರುವುದಿಲ್ಲ ಹಾಗೂ ಕೆ.ಟಿ.ಪಿ.ಪಿ ಕಾಯ್ದೆ ನಿಯಮಗಳಲ್ಲಿ ಎಲ್-2 ಗುತ್ತಿಗೆದಾರರನ್ನು ಪರಿಗಣಿಸಲು ಅವಕಾಶ ಇಲ್ಲದಿರುವುದರಿಂದ ಟೆಂಡರ್ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲಾಯಿತು.

ಎರಡನೇ ಬಾರಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲು ಸರ್ಕಾರವು ಅನುಮತಿ ನೀಡಿದ್ದ ಹಿನ್ನಲೆಯಲ್ಲಿ ದಿನಾಂಕ:04-01-2022 ರಂದು ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಅಂತಿಮಗೊಳಿಸಿ ಅರ್ಹ ಸಂಸ್ಥೆಗೆ ಆದೇಶ ನೀಡುವ ಸಂಬಂಧ ಪರಿಶೀಲಿಸಲಾಗುತ್ತಿದೆ.

**ಆಕುಕ 28 ಎಸ್‌ಬಿವಿ 2023**

**(ಡಾ. ಕೆ ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

16/2/2023